ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು

ದಿನಾಂಕಃ

**ಸಿ.ಸಿ.ನಂ.23/2026**

ಫಿರ್ಯಾದುದಾರರು: ಮೆಸರ್ಸ್ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸ್ ನಂ.14 ಎ,
ಸೌತ್ ಫೇಸ್, ಇಂಡಸ್ಟ್ರಿಯಲ್ ಎಸ್ಟೇಟ್,
ಗೌಂಡಿ, ಚೆನ್ನೈ.
ಇದರ ಶಾಖೆಃ ಮೆ. ಶ್ರೀರಾಮ್ ಫೈನಾನ್ಸ್
ಲಿಮಿಟೆಡ್, ಐ.ಜಿ.ರಸ್ತೆ, ಚಿಕ್ಕಮಗಳೂರು,
ಪ್ರತಿನಿಧಿಸುವವರು ಜಿಪಿಎ ಹೋಲ್ಡರ್
ಶ್ರೀ. ಕಾಂತರಾಜು.

ವಿರುದ್ಧ

ಆರೋಪಿ : ಶ್ರೀ ಸಿ.ಸಿ. ಮಣಿಕಂಠ
ಬಿನ್ ಚಂದ್ರ ಸಿ.ಸಿ.
ವಾಸಃ ಬಲ್ಬ್ ಫ್ಯಾಕ್ಟರಿ ರಸ್ತೆ,
ಗೌರಿಕಾಲುವೆ, ವಿಜಯಪುರ,
ಚಿಕ್ಕಮಗಳೂರು.

**<u>: ದಂಡ ಪ್ರಕ್ರಿಯಾ ಸಂಹಿತೆ ಕಲಂ.351 ಅಡಿಯಲ್ಲಿ ಆರೋಪಿ ಹೇಳಿಕೆಃ</u>**

1. ಅಭಿಯೋಜನೆಯವರ ಪರ ಸಾಕ್ಷಿ ವಿಚಾರಣೆಯನ್ನು ಕೇಳಿರುವಿಯಾ?

ಉತ್ತರ :

2. ಫ್ರಾಸಾ-1 – ಶ್ರೀ. ಕಾಂತರಾಜು ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ತಮ್ಮ ಸಂಸ್ಥೆಯಿಂದ ರೂ.3,70,000/- ಗಳನ್ನು ಸಾಲವಾಗಿ ಪಡೆದುಕೊಂಡು ಸದರಿ ಮೊತ್ತದ ಪಾವತಿಗಾಗಿ ದಿನಾಂಕ 04.09.2025 ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಲ್ಲಂದೂರು ರಸ್ತೆ, ಶಾಖೆ, ಚೆಕ್ ನಂ.627776 ನ್ನು ರೂಃ 3,70,000/- ಗಳಿಗೆ ನೀಡಿದ್ದೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

3. ಫ್ರಾಸಾ-1 ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಹೇಳಿರುವುದೇನೆಂದರೆ ತಾನು ಸದರಿ ಚೆಕ್ಕನ್ನು ಹೆಚ್.ಡಿ.ಎಫ್.ಸಿ. ಬ್ಯಾಂಕ್, ಎಂ.ಜಿ. ರಸ್ತೆ ಚಿಕ್ಕಮಗಳೂರು ಶಾಖೆಗೆ ನಗದೀಕರಣಕ್ಕೆಂದು ಸಲ್ಲಿಸಿದಾಗ, ಸದರಿ ಚೆಕ್ **"Funds Insuffient"** ಎಂಬ ಹಿಂಬರಹದೊಂದಿಗೆ ನಗದಾಗದೇ

ವಾಪಾಸ್ಸು ಬಂದಿರುವುದೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

4. ಫ್ರಾಸಾ-1 ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಸದರಿ ಚೆಕ್ ನಗದು ಆಗದೇ ಇದ್ದಾಗ, ದಿನಾಂಕಃ 18.09.2025 ರಂದು ನೋಟಿಸ್ ನೀಡಿದ್ದು, ನೀವು ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಹಾಗೂ ತನ್ನ ಪರವಾಗಿ ನಿಪಿ-1 ರಿಂದ 6 ದಾಖಲೆಗಳನ್ನು ನಿಶಾನೆಯನ್ನಾಗಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

5. ನೀವು ಈ ಮೊಕದ್ದಮೆಯಲ್ಲಿ ಏನನ್ನಾದರು ಹೇಳುವುದಿದೆಯೇ?

ಉತ್ತರಃ

6. ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲೆ ಹಾಜರುಪಡಿಸುತ್ತೀರಾ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

Sd/-
**[ಕುಮಾರಿ ಸುಜಾತ]**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮು.ನ್ಯಾದಂ., ಚಿಕ್ಕಮಗಳೂರು.